೧೦೦ ವರ್ಷಗಳಾದರೂ ಕೂಡ ಅವರ ವಿಚಾರಧಾರೆಯನ್ನು ಪ್ರತಿದಿವಸವೂ ಸಮರ್ಥನೆ ಮಾಡಿಕೊಳ್ಳಲೇಬೇಕಾಗಿದೆ. ಇವತ್ತು ಏನು ಸಭೆಯ ಮುಂದೆ ನಿರ್ಣಯವಿದೆ ಇದಕ್ಕೆ ಎಲ್ಲರೂ ಸಂಪೂರ್ಣವಾದ ಬೆಂಬಲವನ್ನು ಕೊಡಬೇಕೆಂದು ಮಿತ್ರರಲ್ಲಿ ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಪಂಪಾಪತಿ (ದಾವಣಗೆರೆ).—ಮಾನ್ಯ ಸಭಾಧ್ಯಕ್ಷರೆ. ನಮ್ಮ ಸಭಾ ನಾಯಕರು ತಂದಿರತಕ್ಕ ನಿರ್ಣಯಕ್ಕೆ ನನ್ನ ಸಂಪೂರ್ಣವಾದ ಅನುಮೋದನೆಯನ್ನು ಸೂಚಿಸುತ್ತೇನೆ. ಕಾರ್ಲ್ ಮಾರ್ಕ್ಸ್‌ರವರ ಶತಾಬ್ಧಿಯ ಬಗ್ಗೆ ಈಗಾಗಲೇ ನಮ್ಮ ಎಲ್ಲಾ ನಾಯಕರೂ ಮಾತನಾಡಿದ್ದಾರೆ. ಮುಖ್ಯವಾಗಿ ಇವತ್ತು ಬಡತನದ ಅಂತರ ಹೋಗಬೇಕಾಗಿದ್ದರೆ ಅದು ಕಾರ್ಲ್ ಮಾರ್ಕ್ಸ್‌ರವರ ವಾದವನ್ನು ಅನುಸರಿಸಿಕೊಂಡು ಬಂದರೆ ಮಾತ್ರ ಸಾಧ್ಯವೆನ್ನೆತಕ್ಕದ್ದು ನಮಗೆ ಕಾಣುತ್ತಿದೆ. ಪ್ರಪಂಚದಲ್ಲಿ ಪೂರ್ತಿ ಒಂದು ಭಾಗ ಬಡತನ, ನಿರುದ್ಯೋಗದಿಂದ ಏನು ಬಳಲುತ್ತಿದ್ದರು ಅವರೆಲ್ಲರೂ ಇವತ್ತು ಸುಖವಾಗಿ ಬಾಳುವಂಥ ಒಂದು ಪರಿಸ್ಥಿತಿ ಉಂಟಾಗುವುದಕ್ಕೆ ಮುಖ್ಯ ಕಾರಣರೇ ಮಾರ್ಕ್ಸ್‌ರವರು. ಇವತ್ತು ಮಾರ್ಕ್ಸ್‌ವಾದವನ್ನು ಒಪ್ಪಿಕೊಂಡು ಜಾರಿಗೆ ತಂದಿರುವುದರಿಂದಲೇ ಭಾರತದಲ್ಲೂ ಕೂಡ ಇಂಥಾ ಒಂದು ವ್ಯವಸ್ಥೆಯನ್ನು ಜಾರಿಗೆ ತರಬೇಕು ಎನ್ನುವ ಬಗ್ಗೆ ಪ್ರಯತ್ನ ನಡೆಯುತ್ತಿದೆ. ಈ ಪ್ರಯತ್ನ ಆದಷ್ಟು ಜಾಗ್ರತೆ ಆಚರಣೆಗೆ ಬಂದರೆ ಅದು ನಮಗೂ ಒಂದು ಹೆಮ್ಮೆ ತರತಕ್ಕಂಥದ್ದು ಹೇಳಿ, ಈಗ ನಮ್ಮ ಸಭೆಯ ಮುಂದಿರತಕ್ಕ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರುಗಳು ಕಾರ್ಲ್ ಮಾರ್ಕ್ಸ್ ಬಗ್ಗೆ ಮಾತನಾಡಿರುವುದರ ಜೊತೆಗೆ ನಾನೂ ಸಹ ಭಾಗಿಯಾಗಿ ಸಭೆ ಈ ನಿರ್ಣಯವನ್ನು ಸರ್ವಾನುಮತದಿಂದ ಒಪ್ಪಿದೆ ಎಂದು ಭಾವಿಸುತ್ತೇನೆ.

ANNOUNCEMENT

Resignation by Sri P. G. R. Sindhia of his Assembly membership

I have received an intimation from Sri P. G. R. Sindhia of his intention to resign from the membership of the Assembly. I have accepted his resignation from to-day 2 P. M.

ವಿತ್ತೀಯ ಕಾರ್ಯಕಲಾಪಗಳು

ಅನುಪೂರಕ ಅಂದಾಜುಗಳ ಮಂಡನೆ

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಭಾರತ ಸಂವಿಧಾನದ ೨೦೪ (೧)ನೇ ಅನುಚ್ಛೇದದ ಮೇರೆಗೆ ೧೯೮೨-೮೩ನೇ ಸಾಲಿನ ಅನುಪೂರಕ ಅಂದಾಜುಗಳನ್ನು (ಎರಡನೆಯ ಕಂತು) ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು.—೧೯೮೨-೮೩ನೇ ಸಾಲಿನ ಅನುಪೂರಕ ಅಂದಾಜುಗಳನ್ನು ಮಂಡಿಸಲಾಗಿದೆ.